# ಸಿದ್ದಯ್ಯ ಪುರಾಣಿಕರ ಕಾವ್ಯಗಳಲ್ಲಿ ನಾಡು ನುಡಿಯ ಚಿಂತನೆ

**ನಾಗೇಂದ್ರಪ್ಪ ಶಿವಶರಣಪ್ಪ***

**DOI: https://doi.org/10.5281/zenodo.21793525**

**ABSTRACT**

ಆಧುನಿಕ ಕನ್ನಡ ಕಾವ್ಯ ಪರಂಪರೆಯಲ್ಲಿ ಸಿದ್ದಯ್ಯ ಪುರಾಣಿಕರು ನಾಡು–ನುಡಿಯ ಬಗ್ಗೆ ಅಪಾರ ಪ್ರೇಮವನ್ನು ಅಭಿವ್ಯಕ್ತಿಸಿದ ಪ್ರಮುಖ ಕವಿ. ಕನ್ನಡಿಗರಲ್ಲಿ ಬೇರೂರಿರುವ ಪರಭಾಷಾ ವ್ಯಾಮೋಹದಿಂದ ಕಣ್ಮರೆಯಾಗುತ್ತಿರುವ ತಾಯ್ನುಡಿಯ ರಕ್ಷಣೆಯ ಬಗ್ಗೆ ಇವರ ಕಾವ್ಯಗಳು ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತವೆ. 'ಹೊತ್ತಿತೋ ಹೊತ್ತಿತು ಕನ್ನಡದ ದೀಪ', 'ಕರುನಾಡು ನಿನ್ನದು' ಮುಂತಾದ ಕವಿತೆಗಳ ಮೂಲಕ ಪುರಾಣಿಕರು ಕನ್ನಡ ನಾಡಿನ ಪ್ರಾಕೃತಿಕ ಸೌಂದರ್ಯ, ಬಸವಣ್ಣ, ವಿದ್ಯಾರಣ್ಯರಂತಹ ಮಹನೀಯರ ಆದರ್ಶಗಳು ಹಾಗೂ ಸಾಂಸ್ಕೃತಿಕ ಹಿರಿಮೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಕನ್ನಡಿಗರ ಆಲಸ್ಯ, ಅಂತಃಕಲಹಗಳನ್ನು ಬಿಟ್ಟು, ಭಾಷೆಯನ್ನು ಉದ್ಯೋಗದ ಭಾಷೆಯನ್ನಾಗಿ ಬೆಳೆಸಬೇಕೆಂಬುದು ಅವರ ಆಶಯವಾಗಿದೆ. ಒಟ್ಟಾರೆಯಾಗಿ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿರುವ ಪುರಾಣಿಕರ ಕಾವ್ಯಗಳು, ಕನ್ನಡಿಗರಲ್ಲಿ ಒಗ್ಗಟ್ಟು ಹಾಗೂ ಸ್ವಾಭಿಮಾನವನ್ನು ಜಾಗೃತಗೊಳಿಸುವ ವಿಶಿಷ್ಟ ಬಗೆಯನ್ನು ಇಲ್ಲಿ ವಿವರವಾಗಿ ವಿಶ್ಲೇಷಿಸಲಾಗಿದೆ.

**KEYWORDS:** ಸಿದ್ದಯ್ಯ ಪುರಾಣಿಕ, ನಾಡು–ನುಡಿ ಚಿಂತನೆ, ಆಧುನಿಕ ಕನ್ನಡ ಕಾವ್ಯ, ಭಾಷಾಭಿಮಾನ, ಸಾಂಸ್ಕೃತಿಕ ಪ್ರಜ್ಞೆ.

* **ಡಾ. ನಾಗೇಂದ್ರಪ್ಪ ಶಿವಶರಣಪ್ಪ,** ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಆಧುನಿಕ ಕನ್ನಡ ಕಾವ್ಯದಲ್ಲಿ ನಾಡು-ನುಡಿಯ ಚಿತ್ರಣ ವಿಭಿನ್ನ ಮತ್ತು ವಿಶಿಷ್ಟವಾಗಿ ಮೂಡಿಬಂದಿದೆ. ನಾಡು ನುಡಿಯ ಬಗ್ಗೆ ಕವಿಗಳಲ್ಲಿ ಅಷ್ಟು ಜಾಗ್ರತೆ ಪ್ರಜ್ಞೆ ಬರಬೇಕಾದರೆ "ಭಾರತಕ್ಕೆ ಬ್ರಿಟಿಷರು ಆಗಮನವಾಗಿ ಅವರಿಂದ ಇಲ್ಲಿ ವಸಹಾತುಶಾಹಿ ಸಂಸ್ಕೃತಿ ಮೈತಳೆದಾಗ, ಈ ನಾಡಿನ ಕಲ್ಪನೆ ಮಹತ್ತರ ತಿರುವನ್ನು ಪಡೆಯುತ್ತದೆ. ವಸಾಹತು ಕಾಲದಲ್ಲಿ ಕಾಣಿಸಿಕೊಂಡು ಹಲವು ನೂತನ ಕಲ್ಪನೆಗಳಲ್ಲಿ ಒಂದಾದ ಇದು ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ನಡೆದ ಏಕೀಕರಣ ಚಳುವಳಿಯ ತೀವ್ರತೆಯಲ್ಲಿ ಜಾಗೃತಗೊಳ್ಳುತ್ತದೆ. ಈಗಾಗಲೇ ಇದ್ದ ಪ್ರಾಚೀನ 'ನಾಡಿನ' ಕಲ್ಪನೆ ಇಲ್ಲಿ ತನ್ನವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತದೆ. ಉದಾಹರಣೆಗೆ ದಕ್ಷಿಣ ಭಾರತದ ಸಂದರ್ಭದಲ್ಲಿ 'ಕನ್ನಡ'ನಾಡು, ತಮಿಳುನಾಡು, ತೆಲುಗು ನಾಡು ಹೀಗೆ" ಇಂತಹ ಅನೇಕ ಮಾತುಗಳು ಕಾವ್ಯದ ಉದ್ದಕ್ಕೂ ಕಾಣಬಹುದು ನಾಡಿನ ಪ್ರೇಮ ಹತ್ತು ಹಲವು ರೀತಿಗಳಲ್ಲಿ ನಾಡನ್ನು ಉಳಿಸುತ್ತದೆ, ಬೆಳೆಸುತ್ತದೆ, ಬೆಳಗುತ್ತದೆ ಈ ಸಂದರ್ಭದಲ್ಲಿ ಹಲವಾರು ಕವಿಗಳು ಕಾವ್ಯದಲ್ಲಿ ಮುಖ್ಯ ವಸ್ತುವಾಗಿ ಅಭಿವ್ಯಕ್ತಿಗೊಂಡಿತ್ತು ಅದಕ್ಕೆ ಅನೇಕ ರೀತಿಯ ಕಾರಣಗಳು ಇದ್ದವು. ಮುಖ್ಯವಾಗಿ ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ. ಡಿ.ವಿ.ಜಿ, ಜಿ.ಪಿ. ರಾಜರತ್ನಂ, ಮುಂತಾದ ಕವಿಗಳ ಕಾವ್ಯದಲ್ಲಿ ನಾಡು-ನುಡಿಯ ಪ್ರೇಮ ವ್ಯಕ್ತಗೊಂಡು ಹಾಗೆ ಸಿದ್ದಯ್ಯ ಪುರಾಣಿಕ, ಮುಂತಾದ ಕವಿಗಳ ಕಾವ್ಯಗಳಲ್ಲಿ ನಾಡು-ನುಡಿಯ ಚಿಂತನೆಗಳು ಇಲ್ಲಿ ಪಡಿಮೂಡಿವೆ.

**ಕನ್ನಡ ನುಡಿ ನಮ್ಮ ಹೆಣ್ಣು**
**ನಮ್ಮ ತೋಟದಿನಿಯ ಹಣ್ಣು**
**ಬಳಿಕ ಬೇರೆ ಬೆಳೆದ ಹೆಣ್ಣು**
**ಬಳಿಗೆ ಸುಳಿದಳು.**
**ಹೆಸರು ರಸದ ಬಳ್ಳಿ ಹಣ್ಣು**
**ಒಳಗೆ ಸುಳಿದಳು**

ಮೊದಲು ಕನ್ನಡ ನುಡಿಗೆ ನೀಡಬೇಕಾದ ಪ್ರಾಮುಖ್ಯತೆಯನ್ನು ಕುರಿತು ಹೇಳುತ್ತಾ ನಂತರ ಅನ್ಯ ಭಾಷೆಯನ್ನು ಪ್ರೀತಿಸಬೇಕು. ಎಂಬ ವಿಚಾರವನ್ನು ಹೇಳಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಗೂ ಅನ್ಯ ಭಾಷೆಗಳ ಅವಶ್ಯಕತೆ ಇದ್ದೇ ಇರುತ್ತದೆ. ಆದರೆ ಅದು ಮೊದಲು ತನ್ನ ಭಾಷೆಗೆ ಪ್ರೀತಿ ನೀಡಿ ನಂತರ ಇತರ ಭಾಷೆಗಳಿಗೆ ನೀಡಬೇಕು ಎಂಬ ಕವಿಯ ಕಲ್ಪನೆ ಅರ್ಥಪೂರ್ಣವಾದದ್ದು. ಇಂತಹ ಅನೇಕ ನಾಡು ಪ್ರೀತಿಯ ಕವಿತೆಗಳು ಹುಟ್ಟಿಕೊಂಡಿವೆ.

**ಬಾರಿಸು ಕನ್ನಡ ಡಿಂಡಿಮವ**
**ಓ! ಕರ್ನಾಟಕ ಹೃದಯ ಶಿವಾ**
**ಸತ್ತಂತಿಹರನು ಬಡಿದೆಚ್ಚರಿಸು**
**ಕಚ್ಚಾಡುವವರನು ಕೂಡಿಸಿ ಒಲಿಸಿ**
**ಹೊಟ್ಟೆಯ ಕಿಚ್ಚಿಗೆ ಕಣ್ಣೀರು ಸುರಿಸು**
**ಒಟ್ಟಿಗೆ ಬಾಳುವ ತೆರದಲ್ಲಿ ಹರಸು**

ಈ ಕವಿತೆಯನ್ನು ರಾಷ್ಟ್ರಕವಿ ಕುವೆಂಪು ಅವರು ತಮ್ಮ ತಮ್ಮಲ್ಲಿಯ ಅಂತಃಕಲಹಗಳನ್ನು ಬಿಟ್ಟು ಎಲ್ಲರು ಸಹೋದರರಂತೆ, ಸಂತೋಷದಿಂದ, ಸಹಬಾಳ್ವೆಯಿಂದ ಬದುಕಬೇಕು ಎಂದು ಹೇಳುತ್ತಾರೆ. 'ಕನ್ನಡಿಗರ ಆಲಸ್ಯ, ಅಸೂಯೆ, ಅಂತಃಕಲಹಗಳೇ ಕರ್ನಾಟಕದ ಪ್ರಗತಿಗೆ ಕಾಲೊಡಕಾಗಿವೆ. ಅವನ್ನು ನಿವಾರಿಸಿ, ಸರ್ವೋದಯಕ್ಕೆ ದಾರಿ ಸವೆಯುವಂತೆ ಕರ್ನಾಟಕ ಹೃದಯ ಶಿವನಿಗೆ ಅರ್ಥಾತ್ ಸಮಷ್ಟಿ ತತ್ವಕ್ಕೆ ಪ್ರಾರ್ಥನೆ ಸಲ್ಲಿಸುತ್ತಾರೆ. ಕುವೆಂಪು ಕನ್ನಡ ಡಿಂಡಿಮದ ತಾರಧ್ವನಿಯಲ್ಲಿ ಎಲ್ಲಿ ಕ್ಷುಲ್ಲಕವಾದ ಗೋಣಗಾಟ, ಕಚ್ಚಾಟಗಳು, ಅಡಗಿ ಹೋಗಬೇಕು. ಕರ್ನಾಟಕ ಹೃದಯ ಶಿವನ ಕಣ್ಣೀರು ಧಾರೆಯಲ್ಲಿ ಹೊಟ್ಟೆಯ ಕಿಚ್ಚು ಅಸೂಯೆಯ ಆಗಬಹುದು, ಜಠರಾಗ್ನಿಯೂ ಆಗಬಹುದು, ಎರಡನ್ನೂ ನಿರಸನಗೊಳಿಸಬಲ್ಲ ಶಕ್ತಿ ಕನ್ನಡ' ಇಂತಹ ಕನ್ನಡ ಜನರ ನಾಡುಪ್ರೀತಿಯನ್ನು ಕುವೆಂಪು ಅವರು ಅತ್ಯಂತ ವಿಶ್ವಾಸದಿಂದ ಅಂತಃಕರಣದಿಂದ ಹೇಳುತ್ತಾರೆ. ದೇಶಾಭಿಮಾನವನ್ನು ನಾಡಾಭಿಮಾನವನ್ನು ಅನೇಕ ಕವಿಗಳು ತಮ್ಮ ಪ್ರೀತಿ ಅಭಿಮಾನವನ್ನು ವಿವಿಧ ನೆಲೆಗಳಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ.

ಪುರಾಣಿಕರ ಕನ್ನಡ ಪ್ರೇಮವೊಂದು ಅಕ್ಷಯನಿಧಿ, ಅವರು ಕನ್ನಡನಾಡಿನ ಮಹತ್ವದ ಕವಿಗಳಲ್ಲಿ ಒಬ್ಬರು. ಕೊಪ್ಪಳ ಜಿಲ್ಲೆಯ ಕಾವ್ಯ ಪರಂಪರೆಯಲ್ಲಿ ಇವರು ಪ್ರಥಮ ಕವಿಗಳು. ಅವಿಭಜಿತ ರಾಯಚೂರು ಜಿಲ್ಲೆ ಈಗ ಕೊಪ್ಪಳ ಜಿಲ್ಲೆಯ ಯಲಬುರ್ಗಿ ತಾಲೂಕಿನ ದ್ಯಾಂಪುರದಲ್ಲಿ ಕಲ್ಲಿನಾಥಶಾಸ್ತ್ರಿ ಮತ್ತು ದಾನಮ್ಮ ದಂಪತಿಗಳ ಉದರದಲ್ಲಿ ಜನಿಸಿ ಅಪ್ಪಟ ಚಿನ್ನದಂತೆ ಬೆಳೆದರು. ಕುಕನೂರು, ಕಲಬುರ್ಗಿ, ಹಾಗೂ ಹೈದ್ರಾಬಾದಗಳಲ್ಲಿ ವಿದ್ಯಾಭ್ಯಾಸ ಮಾಡಿದರು. 1943ರಲ್ಲಿ ತಹಸೀಲ್ದಾರರಾಗಿ ಆಯ್ಕೆಗೊಂಡು. ನಾಡಿನ ಜನರ ಸೇವೆಯ ಜೊತೆಗೆ ಸಾಹಿತ್ಯ ಸೇವೆಯನ್ನು ಮಾಡಿದರು. ಜಲಪಾತ, ಕರುಣಾ ಶ್ರಾವಣ, ಮಾನಸ ಸರೋವರ, ಕಲ್ಲೋಲ ಮಾಲೆ, ಮೊದಲು ಮಾನವನಾಗು, ಮುಂತಾದ ಕಾವ್ಯಗಳನ್ನು ರಚಿಸಿ ಕನ್ನಡಮ್ಮನ ಮಡಿಲು ತುಂಬಿದರು. ಇವರ ಕಾವ್ಯಗಳಲ್ಲಿ ಜನರ ಜೀವನ, ನಾಡುನುಡಿ, ದೇಶಾಭಿಮಾನ, ಸಾಮಾಜಿಕ ಜೀವನ, ಪರಿಸರ ಪ್ರಜ್ಞೆ, ಮಹಿಳಾ ಸಮಸ್ಯೆಗಳು, ಮುಂತಾದ ಅಂಶಗಳನ್ನು ಕಾವ್ಯಕ್ಕೆ ವಸ್ತುವಾಗಿ ಬಳಸಿ ಅನೇಕ ಕವಿತೆಗಳನ್ನು ರಚಿಸಿದ್ದಾರೆ.

**ನಂಬು ಕನ್ನಡವನ್ನು ನಂಬು ಕನ್ನಡ ಜನವ**
**ನಂಬು ಕನ್ನಡನಾಡ ಭವಿಷ್ಯವನ್ನು**
**ಕನ್ನಡದ ಮೂಲಕವೆ ಕನ್ನಡಿಗನುದ್ಧಾರ**
**ಕನ್ನಡದಿ ನಂಬಿಕೆಯನುಳಿಸಿ ಬೆಳೆಸು.**

ಕನ್ನಡ ನಾಡಿನ ಅದಮ್ಯ ಪ್ರೀತಿಯನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಕನ್ನಡ ಭಾಷೆ ಇಂದು ಅಳಿವಿನಂಚಿನಲ್ಲಿದೆ ಎಂದು ಅನೇಕ ವಿದ್ವಾಂಸರು ಕಳವಳಪಡುತ್ತಿದ್ದಾರೆ. ಯಾಕೆಂದರೆ ಪರಭಾಷೆಯ ವ್ಯಾಮೋಹ ಜಾಸ್ತಿಯಾಗಿ ತಾಯಿ ನುಡಿಯನ್ನು ನಿರ್ಲಕ್ಷಿಸುತ್ತಿದ್ದಾರೆ. ಇಂಗ್ಲೀಷ ಭಾಷೆಯೆ ಜಗತ್ತನ್ನು ಆಳುತ್ತದೆ, ಇಂಗ್ಲೀಷ ಬಂದರೆ ಮಾತ್ರ ನಾವು ಬದುಕಲು ಅನುಕೂಲವಾಗುತ್ತದೆ. ಕನ್ನಡ ಬಂದರೆ ನಮ್ಮ ನಾಡನ್ನು

ಬಿಟ್ಟು ಬೇರೆ ರಾಜ್ಯಗಳಲ್ಲಿ ಅಥವಾ ರಾಷ್ಟ್ರಗಳಲ್ಲಿ ಹೋಗಿ ಬದುಕಲು ಆಗುವುದಿಲ್ಲ ಆದ್ದರಿಂದ ಇಂಗ್ಲೀಷನ್ನು ಕಲಿತು ಬೇರೆ ಬೇರೆ ರಾಷ್ಟ್ರಗಳಿಗೆ ಉದ್ಯೋಗವನ್ನು ಅರಸಿ ಹೋಗಬಹುದು ಎಂದು ಅನೇಕ ಯುವಜನಾಂಗ ಇಂಗ್ಲೀಷ ಮೋಹದೊಳಗೆ ಬಿದ್ದಿದ್ದಾರೆ ಎಂಬುದು ಸರ್ವವಿಧಿತವಾದ ಮಾತು. ಇಂಗ್ಲೀಷಿನ ಜೊತೆಗೆ ತಾಯಿನುಡಿಯಾದ ಕನ್ನಡವನ್ನು ಅವರು ಮರೆತಿದ್ದಾರೆ. ಜೊತೆಗೆ ನಮ್ಮದೇ ನೆಲವಾದ ಬೆಂಗಳೂರಿನಂತಹ ಮಹಾನಗರದಲ್ಲಿ ಕನ್ನಡಿಗರೆ ಪರಕೀಯರಾಗಿ ಬಿಟ್ಟಿದ್ದಾರೆ. ಅಲ್ಲಿ ನಿಂತು ನೋಡಿದರೆ ನಾವು ಬೇರೆ ದೇಶಕ್ಕೇನಾದರು ಬಂದಿದ್ದೇವೆಯೋ ಎಂದು ಅನಿಸದೆ ಇರದು.

ಹೀಗಿರುವಾಗ ನಾಡಿನ ಪ್ರೀತಿಯನ್ನು ಭಾಷೆಯ ಪ್ರೀತಿಯನ್ನು ಕವಿಗಳು, ಪಂಡಿತರು, ವಿದ್ವಾಂಸರು ಹೇಳುತ್ತಾರೆ. ಹಾಗೆಯೇ ಮುಂದಕ್ಕೆ ಹೋಗಿ ಬರಗೂರ ರಾಮಚಂದ್ರಪ್ಪ, ದೇವನೂರು ಮಹಾದೇವರಂತಹ ಸಾಹಿತಿಗಳು ಕನ್ನಡ ನಾಡಿನಲ್ಲಿ ನಾವು ಕನ್ನಡವನ್ನು ಉಳಿಸುವ ಹೋರಾಟ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಯಾಕೆಂದರೆ ನಮ್ಮನ್ನಾಳುವ ದೊರೆಗಳು ಹೆಚ್ಚು ಹೆಚ್ಚು ಪರಭಾಷೆಗಳಿಗೆ ಮನ್ನಣೆಯನ್ನು ನೀಡುತ್ತಿದ್ದಾರೆ. ಈಗ ಹಿಂದಿ ಭಾಷೆಯ ಹೇರಿಕೆಯೊಂದು ನಡೆದಿದೆ. ಇದಕ್ಕೆಲ್ಲ ಪರಿಹಾರ ಎಂದರೆ ಕನ್ನಡ ಮಾತನಾಡುವ ಜನರು ಮೊದಲು ಬದುಕಬೇಕು ಕನ್ನಡ ತನ್ನಿಂದತಾನೇ ಬದುಕುತ್ತದೆ. ಮಾತನಾಡುವ ಜನ ಬದುಕಬೇಕಾದರೆ ಅವರ ಕೈಗೆ ಕೆಲಸ ಕೊಡಬೇಕು. ಕೆಲಸ ಕೊಟ್ಟರೆ ಜನ ಬದುಕುತ್ತಾರೆ. ಜನ ಬದುಕಿದರೆ ಭಾಷೆ ತನ್ನಿಂದ ತಾನೇ ಬದುಕುತ್ತದೆ ಎಂದು ವಿದ್ವಾಂಸರು ಹೇಳುತ್ತಾರೆ.

ಜೊತೆಗೆ ಕನ್ನಡ ಭಾಷೆ ಅದು ಅನ್ನದ ಭಾಷೆ ಆಗಬೇಕು, ಉದ್ಯೋಗದ ಭಾಷೆಯಾಗಬೇಕು, ಎಂದು ಕನ್ನಡಿಗರೆಲ್ಲರ ಆಸೆಯಾಗಿದೆ ಇದನ್ನು ಅರ್ಥಮಾಡಿಕೊಂಡು ಆಳುವ ವರ್ಗ ಪೂರೈಸಿದರೆ ಕನ್ನಡ ನಾಡು, ಕನ್ನಡ ಜನ, ಕನ್ನಡ ಭಾಷೆ ಸುಭಿಕ್ಷೆಯಿಂದ ಇರಲು ಸಾಧ್ಯವಾಗುತ್ತದೆ. ಇಂತಹ ಕನ್ನಡ ಪ್ರೀತಿಯನ್ನು ಪುರಾಣಿಕರು ಹೀಗೆ ಹೇಳುತ್ತಾರೆ. ಕನ್ನಡದ ಮೂಲಕವೆ ಕನ್ನಡಿಗರ ಉದ್ದಾರವಾಗುತ್ತದೆ. ಅದಕ್ಕಾಗಿ ಅದನ್ನು ನಂಬು, ಕನ್ನಡದಲ್ಲಿ ನಂಬಿಕೆಯನ್ನು ಕಳೆದುಕೊಳ್ಳಬೇಡ ಎಂದು ಹೇಳುತ್ತಾರೆ. ನಾಡು ನುಡಿಗಳ ಇತಿಹಾಸವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡದವರು ನಾಡನ್ನು ಕಟ್ಟಲಾರರೆಂಬ ಸತ್ಯವನ್ನು ಎಲ್ಲ ಆಡಳಿತಾಧಿಕಾರಿಗಳು ಪುರಾಣಿಕರಿಂದ ಕಲಿಯಬೇಕಾಗಿದೆ. ಇಂದಿನ ಅಧಿಕಾರಿಗಳು, ಮಂತ್ರಿಗಳು, ಮುಖ್ಯಮಂತ್ರಿಗಳು. ಕೂಡ ಇವರ ಮಾತನ್ನು ಆಲಿಸಿ ಮುನ್ನಡೆದರೆ ನಿಜವಾಗಿಯೂ ಕನ್ನಡನಾಡು ಉದ್ದಾರವಾಗುವಲ್ಲಿ ಸಂಶಯವಿಲ್ಲ. ಈ ಸತ್ಯವನ್ನರಿಯದ ಕನ್ನಡಿಗರು ಕನ್ನಡ ನಾಡಿನಲ್ಲಿರಲು ಯೋಗ್ಯರಲ್ಲ.

**ಕನ್ನಡದ ಹೊಂದೀವಿಗೆಯ ಹಚ್ಚಲಿನ್ನೊಮ್ಮೆ**
**ಬಸವ-ವಿದ್ಯಾರಣ್ಯ ಹುಟ್ಟಿ ಬರಲಿ**
**ಕನ್ನಡದ ವೈರಿಗಳ ಮೆಟ್ಟಿ ಕನ್ನಡನಾಡು**

**ಚಿನ್ನರನ್ನದ ಗುಡಿಯ ಕಟ್ಟಿ ಬರಲಿ**
**ಕನ್ನಡದ ಬತ್ತಿಯೊಳಡಗಿದ ಮಂಕನು ತೆಗೆಯೆ**
**ನನ್ನ ಕಾಯವು ಚಾಚು–ಕಡ್ಡಿಯಾಗಿರಲಿ**
**ಭಾರತದ ದೀಪಾವಳಿಗೆಯಲ್ಲಿ ಶಿವಗನ್ನಡದ**
**ಜ್ಯೋತಿಯೆಂದು ತೇಜಸ್ವಿನೊಡ್ಡಿಯಾಗಿರಲಿ.**

ಜೈನರ ಕಾವ್ಯದ ಶರಣರ ವಚನದ, ದಾಸರು ಹಾಡಿದ ಈ ನಾಡು ಎಂಬ ಕವಿವಾಣಿಯಂತೆ ಶ್ರೀಮಂತ ಕನ್ನಡನಾಡು ಅನೇಕ ಸಂತ, ಶರಣ, ಮಹಾಂತರಿಗೆ ಜನ್ಮಕ್ಷೇತ್ರ. ಸಂತ, ಶರಣರು, ಮಹಾಂತರು ಕಾಲಕಾಲಕ್ಕೆ ಬಂದು ಕನ್ನಡ ಅಸ್ಮಿತೆಯನ್ನು ಬೆಳಗಿದರು. ಕನ್ನಡದ ದೀವಿಗೆಯನ್ನು ಹಚ್ಚಲಿ ಎಂದು ಪುರಾಣಿಕರು ಹೇಳಿದ್ದಾರೆ. ಬಸವಣ್ಣನವರು ಬಂದು ಕನ್ನಡ ನಾಡನ್ನು ರಾಷ್ಟ್ರಗಳಿಗೆ ಪರಿಚಯಿಸಿದರು. ಅದಕ್ಕಾಗಿ ಇಂದು ಲಂಡನ್ನಿನಲ್ಲಿ ಬಸವಣ್ಣನವರ ಮೂರ್ತಿಯನ್ನು ಸ್ಥಾಪಿಸಿದ್ದಾರೆ. ಅಂದರೆ ಬಸವಣ್ಣನವರಿಂದ ಕನ್ನಡ ನಾಡಿನಲ್ಲಿ ಆಗಿರುವ ಆಂದೋಲನ ಜಗತ್ತಿಗೆ ಮಾದರಿಯಾಯಿತು. ಸಮಾನತೆಯ ತತ್ವ, ಶೋಷಣೆಮುಕ್ತ ಸಮಾಜ, ಸರ್ವರನ್ನು ಒಂದೆ ಎಂದು ಅಪ್ಪಿಕೊಳ್ಳುವ ಧರ್ಮವನ್ನು ಅವರು ಪ್ರಚಾರ ಮಾಡುವುದರ ಮೂಲಕ 12ನೇ ಶತಮಾನದಲ್ಲಿ ಕನ್ನಡದ ದೀವಿಗೆಯನ್ನು ಬೆಳಗಿದರು. ಅಂತಹದೇ ಮಹಾಪುರುಷ ಇಂದು ಬಂದು ಮತ್ತೊಮ್ಮೆ ಹೊಂದೀವಿಗೆಯನ್ನು ಬೆಳಗಲಿ ಎಂಬ ಆಸೆ ಕವಿಗಳದ್ದು. ವಿದ್ಯಾರಣ್ಯರಂತಹ ಗುರುಗಳ ಕನಸೇ ಸುಂದರವಾದ ವಿಜಯನಗರ ಸಾಮ್ರಾಜ್ಯ. ಅದು ಕನ್ನಡ ನೆಲದಲ್ಲಿ ಹುಟ್ಟಿರುವ ಸಾಮ್ರಾಜ್ಯ ಸುವರ್ಣಯುಗವೆಂದು ಹೆಸರಾದ ಸಾಮ್ರಾಜ್ಯ ವಿದ್ಯಾರಣ್ಯರ ಮಾರ್ಗದರ್ಶನದಲ್ಲಿ ಹಕ್ಕಬುಕ್ಕರಿಂದ ಸ್ಥಾಪನೆಗೊಂಡು ಕನ್ನಡ ಕೀರ್ತಿ ಪತಾಕೆಯನ್ನು ದಶದಿಕ್ಕುಗಳಿಗೆ ಹಬ್ಬಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ವಿಜಯನಗರದ ಅರಸರು ಹೇಗೆ ವೈರಿಗಳನ್ನು ಮೆಟ್ಟಿ ನಾಡಿನ ರಕ್ಷಣೆಯನ್ನು ಮಾಡಿದ್ದಾರೋ ಅಂತಹ ವೀರತ್ವದ ಅರಸರು ಬರಬೇಕು ಪರಕೀಯರನ್ನು ದೇಶ ದೋಚುತ್ತಿರುವ ಕಳ್ಳರನ್ನು ಓಡಿಸಿ ಸುಂದರವಾದ ರಾಷ್ಟ್ರ ನಿರ್ಮಾಣ ಮಾಡಬೇಕು. ಸ್ವಚ್ಛಂದವಾದ ಕನ್ನಡದ ಹೊಂದೀವಿಗೆಯನ್ನು ಹಚ್ಚಬೇಕು ಎಂದು ಹೇಳುವುದರ ಜೊತೆಗೆ ಯಾವ ಯಾವ ಜಿಲ್ಲೆ ಏನನ್ನು ಬೆಳೆಯುತ್ತಿದ್ದಾರೆ. ಆಯಾ ಪ್ರದೇಶದ ಮಹತ್ವದ ಬಗ್ಗೆ ವಿವರಿಸುತ್ತಾರೆ. ಮೈಸೂರು ಪ್ರಾಂತ ಶ್ರೀಗಂಧಕ್ಕೆ, ರಾಯಚೂರು ಹತ್ತಿಗೆ, ಹೆಸರುವಾಸಿಯಾಗಿರುವಂತಹದ್ದನ್ನು ವಿವರಿಸುತ್ತಾರೆ. ನಾಡಿನ ಶ್ರೀಮಂತ ಬೆಳೆಗಳನ್ನು ಮತ್ತು ಕನ್ನಡ ನಾಡಿನ ಚಿಂತನೆಗಳನ್ನು ಇಲ್ಲಿ ಆಗಿಹೋಗಿರುವ ಬಸವನ ತತ್ವಗಳನ್ನು ವಿದ್ಯಾರಣ್ಯರ ಆಡಳಿತ ಸೂತ್ರಗಳನ್ನು ಸಮಗೊಳಿಸಿ ಕನ್ನಡ ಕೀರ್ತಿಯನ್ನು ಮತ್ತೊಮ್ಮೆ ಬೆಳಗಬೇಕು ಎಂದು ಹೇಳುತ್ತಾರೆ. ಕನ್ನಡದ ಶಾಂತಿಯನ್ನು ದಶದಿಕ್ಕುಗಳಿಗೆ ಹರಡಿಸುವಂತಹ ಅರಸರು ಇಂದು ನಾಡಿಗೆ ಬೇಕಾಗಿದ್ದಾರೆ.

**ಹೊನ್ನ ಬೆಳೆ ಬರುತ್ತಿದ್ದ ಕನ್ನಡದ ಹುಲುಸು ಹೊಲ**
**ಬೀಳುಬಿದ್ದಿಹುದಿಂದು ಬಂಜೆಬಯಲಾಗಿ**
**ಉತ್ತುವುದು ಬಹಳಾಯ್ತು ಬಿತ್ತವರೆ ಬರಲಿಲ್ಲ**
**ಮುನ್ನ ಬಿತ್ತಿದ ಬೆಳೆಯೆ ಇದುವರೆಗೆ ಕೊಯ್ಲಾಗಿ**

**ಬರಗಾಲ ಬಂದಿಹುದು ಸಿರಿಯ ತವರೂರಿಗೆ**
**ಹೆರರ ಹಾವಳಿ ಬಂತು ನಮ್ಮ ನಡುಕೇರಿಗೆ**
**ಕೊಟ್ಟುಬಿಟ್ಟೆವು ಹೊಲವ ಪರಜನಕೆ ಕೂರಿಗೆ**
**ನಮ್ಮ ಹಾಳನು ಕಾಂಬ ಕಣ್ಣಿಹುದು ಯಾರಿಗೆ.**

ಕನ್ನಡದ ಬೆಳೆ ಎಂಬ ಕವನದಲ್ಲಿ ಸಿದ್ದಯ್ಯ ಪುರಾಣಿಕರು ಕನ್ನಡ ನಾಡಿನ ಮಹತ್ವವನ್ನು ತುಂಬಾ ಮಾರ್ಮಿಕವಾಗಿ ಹೇಳುತ್ತಿದ್ದಾರೆ. ತುಂಬಾ ಸುಂದರವಾದ ನಾಡು, ತೆಂಗು, ಶ್ರೀಗಂಧ, ಬಾಳೆ, ಅಡಿಕೆ, ಭತ್ತ, ಹತ್ತಿ, ತೊಗರಿಗೆ ಹೆಸರುವಾಸಿಯಾದಂತಹ ಕನ್ನಡನಾಡಿನಲ್ಲಿ ಇಂದು ಹೆರರ ಹಾವಳಿ ಬಂದಿದೆ. ಅಂದರೆ ಪರಕೀಯರನ್ನು ಬಹುರಾಷ್ಟ್ರೀಯ ಕಂಪನಿಗಳನ್ನು ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿದ್ದಾರೆ. ಇಂದಿನ ಆಳುವ ವರ್ಗದವರು. ಆದ್ದರಿಂದ ದೇಶದ ನೆಲವೆಲ್ಲ ಬಂಜರು ನೆಲವಾಗುತ್ತಿದೆ. ಕಂಪನಿಗಳನ್ನು ಸ್ಥಾಪಿಸುವುದರ ಮೂಲಕ ಅದರ ಕಲುಷಿತವಾಗಿ ನೆಲವೆಲ್ಲ ಬಂಜೆಯಾಗಿದೆ. ನಮ್ಮ ನಾಡು ಇಂದು ಬೀಳುಬಿದ್ದಿದೆ. ಇದಕ್ಕೆ ಎರಡು ಕಾರಣಗಳಿವೆ. ಒಂದು ಕಂಪನಿಗಳ ಕಲುಷಿತ ವಾತಾವರಣದಿಂದ ನೆಲ ಯಾವ ಬೆಳೆಯನ್ನು ಬೆಳೆಯದೆ ಬಂಜರು ನೆಲವಾದುದು ಇನ್ನೊಂದು ಕಾರಣ ಭೂಮಿ ಇರುವ ಶ್ರೀಮಂತರೆಲ್ಲ ಪಟ್ಟಣ ಸೇರಿ ಅವರ ಭೂಮಿ ಎಲ್ಲ ಹಾಳುಬಿದ್ದಿದ್ದು ಸಿರಿಸಂಪತ್ತಿನಿಂದ ತುಂಬಿ ತುಳುಕುತ್ತಿರುವ ನಾಡಿಗೆ ಇಂದು ಬರಗಾಲ ಬಂದಿದೆ ಬೇರೆಯವರ ಹಾವಳಿ ಹೆಚ್ಚಾಗಿದೆ. ಭೂಮಿಯನ್ನು ಬೇರೆಯವರಿಗೆ ಮಾರುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಬಂಗಾರದಂತಹ ಕನ್ನಡನಾಡು ಇಂದು ಹಾಳಾಗಿದೆ ಯಾರ ಕಣ್ಣಿಗೂ ಅದು ಕಾಣುತ್ತಿಲ್ಲ ಎಂದು ಲೇಖಕರು ತುಂಬಾ ಕಳವಳವ್ಯಕ್ತಪಡಿಸಿದ್ದಾರೆ.

**ಕೆಲವರು ಬಿತ್ತುತಲಿಹರು ಫಲಬರದ ಪೈರನ್ನು**
**ನಮಗೆ ಬೇಡಾದುದನೆ ಬಿತ್ತುವರು ಕೆಲವರು**
**ಹಸಿವೆ ಸುಡುತ್ತಿರುವಾಗ ಹೂದೋಟಗಳ ಬೆಳೆಸಿ**
**ಹಿಗ್ಗಿನಲ್ಲಿ ಉಬ್ಬಿನಲ್ಲಿ ಕುಣಿಯುವವರು ಕೆಲವರು.**

ಅನ್ನ ಬೆಳೆಯುವ ಭೂಮಿಯಲ್ಲಿ ಕೆಲಸಕ್ಕೆ ಬಾರದ ಎಂತೆಂತಹುದೊ ಬೆಳೆಯುತ್ತಿದ್ದಾರೆ. ನಮಗೆ ಬೇಡವಾದುದನ್ನೇ ಬಿತ್ತುತ್ತಿದ್ದಾರೆ. ಹಸಿವಿನಿಂದ ಜನ ಕಂಗಾಲಾಗಿ ಸಾಯುತ್ತಿರುವಾಗ ಏನನ್ನೋ ಬೆಳೆದು ಅವರ ಭಂಡಾರಗಳನ್ನು ತುಂಬಿ ಕೊಳ್ಳುತ್ತಿರುವ ಜನರು ಇಂದು ದೇಶದಲ್ಲಿ ಹೆಚ್ಚಾಗಿದ್ದಾರೆ. ಹಸನಾಗಿ ಸುಂದರವಾಗಿ ಮಾಡಿದಲ್ಲಿ ಕಸಚೆಲ್ಲುವ ಜನರು ಕನ್ನಡ ನಾಡಿನ ಜನರಿಗೆ ಅನ್ನ ಸಿಗದಿರುವಾಗ ಬೇರೆನಾಡಿನ ಜನಕೆ ಹಣ್ಣು ಕಳಿಸುತ್ತಿದ್ದಾರೆ. ಎಂದು ಕವಿಗಳು ಮರಗುತ್ತಾರೆ. ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತತೆಯ ಭೂಮಿಯನ್ನು ವ್ಯವಸಾಯ ಮಾಡಲು ಬಿಡದೆ ಏನೋ ಕೆಲಸಕ್ಕೆ ಬಾರದುದನ್ನು ತಯಾರು ಮಾಡಲು ಉಪಯೋಗಿಸಿ ಜನರಿಗೆ ತೊಂದರೆ ಉಂಟು ಮಾಡುತ್ತಿದ್ದಾರೆ. ಎಂದು ಈ ಕವಿತೆಯ ಮೂಲಕ ಹೇಳುತ್ತಾರೆ. ಈ ಭೂಮಿ ಮತ್ತೆ ನಮ್ಮವರ ಕೈಗೆಸಿಗಬೇಕು ಅಲ್ಲಿ ಪಂಪ, ಹರಿಹರ ಬಸವ ಮಾಧ್ವರಂತಹ ಜನ ಪ್ರೀತಿಯುಳ್ಳ ಬೆಳೆಯನ್ನು ಬೆಳೆಯಬೇಕು ಎಂಬ ಆಸೆ ಲೇಖಕರದ್ದು.

**ಹೊತ್ತಿತೋ ಹೊತ್ತಿತು**
**ಕನ್ನಡದ ದೀಪ**
**ಮುಗಿಯಿತೋ ಮುಗಿಯಿತು**
**ಶತಮಾನಗಳ ಶಾಪ**
**ಕನ್ನಡದ ಮನೆಯಾಗಿ**
**ಜ್ಯೋತಿರ್ನಿಧಾನ**
**ಕನ್ನಡದ ಪ್ರಾಣ**
**ಕನ್ನಡದ ಮಾನ**
**ಹೊತ್ತಿತೋ ಹೊತ್ತಿತು.**
**ಕನ್ನಡದ ದೀಪ**
**ಚಿರಕಾಲ ಬೆಳಗಲಿ**
**ಕನ್ನಡದ ಶೀಲ**
**ಜನಕೆಲ್ಲ ಬೆಳಕಾಗಿ**
**ಪುಣ್ಯ ಪ್ರದೀಪ**
**ಭಾರತಕೆ ಬಳುವಾಗಿ**
**ಭವ್ಯ ಪ್ರದೀಪ**

ಸಿದ್ದಯ್ಯ ಪುರಾಣಿಕರ 'ಹೊತ್ತಿತೋ ಹೊತ್ತಿತೋ' ಎಂಬ ಕನ್ನಡ ಗೀತೆಯು ಬಹಳ ಪ್ರಸಿದ್ಧವಾದದ್ದು. ಇಂದಿಗೂ ಕೂಡ ಅನೇಕ ಕಾರ್ಯಕ್ರಮಗಳಲ್ಲಿ ರಾಜ್ಯೋತ್ಸವದ ದಿನ ಈ ಗೀತೆಯನ್ನು ಹಾಡುತ್ತಾರೆ. ಇದನ್ನು ಕೇಳುವಾಗ ಪ್ರತಿಯೊಬ್ಬ ಕನ್ನಡಿಗನ ಮೈ ಮನಸ್ಸು ಪುಳಕಿತಗೊಳ್ಳುತ್ತದೆ. ಕನ್ನಡ ನಾಡು ಬಹು ವರ್ಷಗಳವರೆಗೆ ಪರಕೀಯರ ಅಧೀನದಲ್ಲಿತ್ತು. ಅಂದರೆ ಬ್ರಿಟೀಷರ ಅಧೀನದಲ್ಲಿರುವ ಭಾರತ ದೇಶದ ಒಂದು ಭಾಗವಾದ ಕರ್ನಾಟಕವೂ ಕೂಡ ಪಾರತಂತ್ರ್ಯವನ್ನು ಅನುಭವಿಸುತ್ತಿತ್ತು. ಪಾರತಂತ್ರ್ಯದಿಂದ ಮುಕ್ತವಾಗಲು ಅನೇಕ ಹೋರಾಟಗಳು ನಡೆದವು. ನೂರಾರು ಜನರು ಪ್ರಾಣತ್ಯಾಗ ಬಲಿದಾನಗಳು ನಡೆದು ಹೋದವು ಇದರ ಫಲವಾಗಿ ದೇಶ ಸ್ವಾತಂತ್ರ್ಯವಾಯಿತು. ಆಗ ಕರ್ನಾಟಕವು ಕೂಡ ಪಾರತಂತ್ರ್ಯದಿಂದ ಮುಕ್ತವಾಯಿತು. ಕನ್ನಡಿಗರ ಬಹುದಿನಗಳ ಕನಸು ನನಸಾಗಿರುವ ಸಂದರ್ಭದಲ್ಲಿ ಪುರಾಣಿಕರು ಈ ಮಾತನ್ನು ಹೇಳುತ್ತಾರೆ. ಶತಶತಮಾನಗಳಿಂದ ಕಂಡಂತಹ ಕನಸು ನನಸಾಗಿದೆ. ಅದು ಒಂದು ರೀತಿಯಲ್ಲಿ ಶಾಪ ವಿಮೋಚನೆಯಾಗಿದೆ ಎಂದು ಕವಿ ಹೇಳುತ್ತಾರೆ. ಪ್ರತಿಯೊಬ್ಬ ಕನ್ನಡಿಗರ ಮನೆಯಲ್ಲಿಯು ಜ್ಯೋತಿ ಬೆಳಗಿದಂತಹ ಅನುಭವವನ್ನು ಕಟ್ಟಿಕೊಡುವರು. ಇದು ಕನ್ನಡಿಗರ ಆತ್ಮಗೌರವದ ಸಂಕೇತ ಹಾಗಾಗಿ ಎಲ್ಲರು ತುಂಬಾ ಆತ್ಮಾಭಿಮಾನದಿಂದ ಹೇಳುತ್ತಾರೆ.

ಕನ್ನಡ ಭಾಷೆಯು ಚಿರಕಾಲ ನಿರಂತರವಾಗಿ ಜ್ಯೋತಿಯಂತೆ ಬೆಳಗಬೇಕು ಕನ್ನಡ ಭಾಷೆಗೆ ಸಾವು ಎನ್ನುವುದು ಎಂದಿಗೂ ಬರಬಾರದು ಇದು ಪ್ರತಿಯೊಬ್ಬರು ಮನೆಮನೆಯ ದೀಪವಾಗಿ ಬೆಳಗಬೇಕು ಎಂದು ಹೇಳುವುದರ ಜೊತೆಗೆ ಪ್ರತಿಯೊಬ್ಬರ ಕನ್ನಡಿಗನ ಆತ್ಮಾಭಿಮಾನವನ್ನು ಜಾಗೃತಗೊಳಿಸುತ್ತಾರೆ.

**ನೂರು ಕುಲಗಳು ಸೇರಿ ಕನ್ನಡದ ಕುಲವಾಗಿ**
**ಭಾರತಕ್ಕೆ ಬಲವಾಗಿ ಬೆಳಗುತಿಹದು.**
**ಈ ಕುಲವ ಒಡೆಯದಿರಿ ಹೋರಾಡಿ ಮರೆಯದಿರಿ**
**ಎಂದು ಕನ್ನಡ ಕಹಳೆ ಮೊಳಗುತಿಹುದು.**

ಕನ್ನಡ ನಾಡಿನಲ್ಲಿ ಅನೇಕ ರೀತಿಯ ನಂಬಿಕೆ ಆಚರಣೆಗಳ ಭಿನ್ನತೆಗಳಿದ್ದರೂ ಎಲ್ಲರು ಒಂದೇ ಕುಲ ಅಥವಾ ಜಾತಿಯ ವಿಚಾರ ಬಂದಾಗ ಯಾವುದೇ ಕಾರಣದಿಂದಲು. ಘರ್ಷಣೆಗೆ ಒಳಗಾಗಬಾರದು, ಎಲ್ಲರು ಕೂಡಿ ಸಾಮರಸ್ಯ ಮತ್ತು ಸಹಬಾಳ್ವೆಯಿಂದಿರಬೇಕು. ಹಲವಾರು ಕುಲಗಳು ಸೇರಿ ಕನ್ನಡದ ಕುಲವಾಗಬೇಕು. ಇದರಿಂದ ಭಾರತ ದೇಶಕ್ಕೆ ಸಹಕಾರಿಯಾಗುತ್ತದೆ. ಎಂದಿಗೂ ಕನ್ನಡದ ನೆಲ ಜಲ ಮತ್ತು ಕುಲ ಒಂದೆ ಎಂಬುದಾಗಿ ಹೇಳುವರು. ನಾಡಿನಲ್ಲಿ ನೂರಾರು ಕುಲಗಳು ಹತ್ತು ಹಲವು ಧರ್ಮಗಳಿರಬೇಕು ಜಾತಿಯ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಬೇರೆ ಬೇರೆಯವರೆ ಹೊರತು ನಾಡಿನ ಹೆಸರು ಬಂದಾಗ ಎಲ್ಲರು ಕನ್ನಡಿಗರು ಎಂಬ ಹೆಮ್ಮೆಯಿಂದ ಮಾತನಾಡುತ್ತಾರೆ. ಅದಕ್ಕೆ ನೂರು ಕುಲಗಳು ಸೇರಿ ಕನ್ನಡ ಕುಲವಾಗಿದೆ. ಅದಕ್ಕಾಗಿ ಕುಲಗಳನ್ನು ವಿಭಜಿಸಿಕೊಂಡು ಹಾಗೆ ಇದು ಹಿಂದು ಕನ್ನಡ, ಇದು ಮುಸಲ್ಮಾನ ಕನ್ನಡ, ಇದು ಕ್ರಿಶ್ಚಿಯನ್ನರ ಕನ್ನಡ ಎಂದು ಭಾಗ ಮಾಡದೆ ಎಲ್ಲರು ಕನ್ನಡಮ್ಮನ ಮಕ್ಕಳು ಎಂದು ಒಂದೆ ತಾಯಿಯ ಅದು ಕನ್ನಡ ತಾಯಿಯ ಮಕ್ಕಳಾಗಿ ಬದುಕಬೇಕು ಎಂದು ಪುರಾಣಿಕರು ಹೇಳುತ್ತಾರೆ.

**ಯೋಗ ನಿದ್ರೆಯ ತೊರೆದು ಪೂರ್ಣರೂಪ ತಳೆದು.**
**ಮತ್ತೊಮ್ಮೆದೋರುವಳು ಕನ್ನಡದ ತಾಯಿ**
**ಬನ್ನಿ ತಾಯ್ನಾಡಿಗರ ತಾಯ್ನುಡಿಯ ಪೂಜೆಗೆ**
**ತನ್ನಿ ತನಿವಗೆಯೆಂಬ ಹೂವು ಕಾಯಿ**
**ಪಂಪ ಹರಿಹರಕಾಣೆ ನಾರಣಪ್ಪನ ಆಣೆ**
**ಮಹಾದೇವಿ ಚೆನ್ನಮ್ಮ ಓಬವ್ವರಾಣೆ**
**ಈಗ ಬಂದಿದೆ ಕಾಲ ತಾಯಿಬರಿಸುವ ಕಾಲ**
**ಇದನು ಕಳಕೊಳ್ಳದಿರಿ ಕನ್ನಡದ ಆಣೆ**

ಕನ್ನಡದ ತಾಯಿಯನ್ನು ಕರೆಯಲು ಸೂಕ್ತವಾದ ಕಾಲಬಂದಿದೆ ಎಂದು ಅದಕ್ಕೆ ಕವಿಗಳ ಆಣೆಯನ್ನಿಡುವರು. ಹಾಗೆ ತಾಯಿಗೆ ಸೇವೆ ಮಾಡುವ ಈ ಸುಸಂದರ್ಭವನ್ನು ಯಾವುದೇ ಕಾರಣದಿಂದಲೂ ಕಳೆದುಕೊಳ್ಳಬೇಡಿ ಎಂದು ವಿನಂತಿಸಿಕೊಳ್ಳುವರು. ಜೊತೆಗೆ ನಮ್ಮ ಪ್ರಾಚೀನ ಕವಿ ಕಾವ್ಯ ಪರಂಪರೆಯನ್ನು ಸ್ಮರಿಸಿಕೊಳ್ಳುವರು. ಪಂಪ, ಹರಿಹರ, ಕುಮಾರವ್ಯಾಸ, ಅಕ್ಕಮಹಾದೇವಿ, ಕಿತ್ತೂರು ರಾಣಿಚೆನ್ನಮ್ಮ, ಒನಕೆ ಓಬವ್ವ, ಮುಂತಾದವರ ಮೇಲೆ ಆಣೆಯನ್ನು ಮಾಡಿಕೊಳ್ಳುವ ಮೂಲಕ ತಾಯಿ ನಾಡಿನ ಭಾಷೆಯ ಸೇವೆ ಮಾಡಲು ಮರೆಯಬಾರದು ಎಂದು ಕವಿ ಕನ್ನಡಿಗರಲ್ಲಿ ಕೇಳಿಕೊಳ್ಳುವರು. ಕನ್ನಡ ತಾಯಿಯ ಆಗಮನಕ್ಕೆ ಸೂರ್ಯಚಂದ್ರರೆ ಸಾಕ್ಷಿಯಾಗುವರು. ಜೊತೆಗೆ ಗಿರಿ, ಸರೋವರ, ಗೊಮ್ಮಟೇಶ್ವರ, ಉಗ್ರನರಸಿಂಹ ಬಾದಾಮಿ, ಬೇಲೂರು, ಉಡುಪಿ ಮುಂತಾದವುಗಳ ಸಾಕ್ಷಿಯೆಂಬಂತೆ ಹೇಳುವರು.

ಈ ಸಂದರ್ಭದಲ್ಲಿ ಕನ್ನಡ ತಾಯಿಯ ತನ್ನ ಯೋಗ ನಿದ್ರೆಯಿಂದ ಎಚ್ಚರವಾಗಿದೆ. ಆ ತಾಯಿಯನ್ನು ಹೇಗೆ ಸ್ವಾಗತಿಸಬೇಕು ಎಂದು ಹೇಳುವರು.

**ಕರುನಾಡು ನಿನ್ನದು ಸಿರಿನಾಡು ನಿನ್ನದು**
**ಹಿರಿನಾಡು ನಿನ್ನದು ಕನ್ನಡದ ಕುವರ**
**ಶ್ರೇಷ್ಠತೆಗೆ ನೆಲೆಯ ಸಂಸ್ಕೃತಿಯ ಸಭೆಯು**
**ದಿವ್ಯತೆಯ ಅಲೆಯು ಈ ನಾಡ ಕುವರ**
**ಕಲ್ಲೆಲ್ಲ ಶಿಲ್ಪಿ ಸೊತ್ತಿಲ್ಲ ಕಾವ್ಯ**
**ಎಲ್ಲೆಲ್ಲು ಸೊಬಗು ಈ ನಾಡಿನಲ್ಲಿ**
**ನಾಡೆಲ್ಲ ನದಿಯು ನೀರೆಲ್ಲ ಸುಧೆಯು**
**ವನವೆಲ್ಲ ಮಧುವು ಈ ನಾಡಿನಲ್ಲಿ**
**ಈ ನಾಡು ಬೆಳೆಸು ನಾಡವರ ಬಲಿಸು**
**ಕನ್ನಡವಾ ಗೆಲಿಸು ನೀ ಬಾಳಿ ಇಲ್ಲಿ.**

ಕರುನಾಡು ನಿನ್ನದು ಎಂಬ ಕವಿತೆಯಲ್ಲಿ ಕನ್ನಡ ನಾಡು–ನುಡಿ, ಸಂಸ್ಕೃತಿ ಸಾಹಿತ್ಯ ಕಲೆಗಳನ್ನು ಕುರಿತು ಕವಿಯು ತುಂಬಾ ಅಭಿಮಾನದಿಂದ ಮಾತನಾಡಿದ್ದಾರೆ. ತಾನು ಕಂಡಿರುವ ಕನ್ನಡ ನಾಡಿನ ವಿಭಿನ್ನ ನೆಲೆಗಳನ್ನು ಕುರಿತು ಸೊಗಸಾಗಿ ವರ್ಣಿಸಿದ್ದಾರೆ. ಕನ್ನಡ ನಾಡಿನ ಕಲೆ, ಕಾವ್ಯ, ಶಿಲ್ಪಕಲೆ, ಸಂಸ್ಕೃತಿಗಳನ್ನು ಕುರಿತು ಹೊಗಳುವರು. ಕನ್ನಡ ನಾಡನ್ನು ಹೊಗಳಿ ವರ್ಣಿಸುವುದು ಕವಿಗೆ ಒಂದು ವಿಶಿಷ್ಟವಾದ ಅನುಭವ. ಕನ್ನಡ ಎಂದೆಂದಿಗೂ ಅಮರವಾಗಿರುವ ಭಾಷೆಯಾಗಿರಬೇಕು ನಾಡು ಯಾವುದಾದರೂ ಒಬ್ಬ ವ್ಯಕ್ತಿಗೆ ಅಥವಾ ಕೆಲವೇ ವ್ಯಕ್ತಿಗಳಿಗೆ ಸೀಮಿತವಾದುದಲ್ಲ ಕರ್ನಾಟಕದಲ್ಲಿ ನೆಲೆಸಿರುವ ಪ್ರತಿಯೊಬ್ಬ ವ್ಯಕ್ತಿಯದು ಕೂಡ. ಕವಿಗೆ ಇರುವುದು ಎಂತಹ ಅಭಿಮಾನವೆಂದರೆ ಇಲ್ಲಿನ ಪ್ರತಿಯೊಂದು ಕಲ್ಲು ಕೂಡ ಶಿಲೆಯಾಗಿ ಕಾಣಿಸುತ್ತದೆ. ಸೊಲ್ಲು ಎಲ್ಲವೂ ಕಾವ್ಯವಾಗಿ ಕಾಣಿಸುತ್ತದೆ. ಎಲ್ಲಿ ನೋಡಿದರಲ್ಲಿ ಸಿರಿ ಸೊಬಗು, ನದಿಯ ನೀರೆಲ್ಲ ಬರೀ ನೀರಲ್ಲ ಪುಟ್ಟಪ್ಪನವರು ಹೇಳುವ ಹಾಗೆ ಪಾವನ ತೀರ್ಥ ಅದು ಅಮೃತಕ್ಕೆ ಸಮನಾದುದು. ಈ ನಾಡಿನಲ್ಲಿ ಹುಟ್ಟಿದ ನಾವುಗಳೇ ಧನ್ಯ ಎಂದು ಹೇಳುತ್ತಾರೆ. ಪ್ರಾಚೀನ ಕಾಲದ ಆದಿಕವಿ ಪಂಪ ಹೇಳಿದ ಮಾತನ್ನು ಇಲ್ಲಿ ನೆನಪಿಸಬೇಕು. ಕನ್ನಡ ನಾಡಿನಲ್ಲಿ ಮನುಷ್ಯರಾಗಿ ಹುಟ್ಟದೆ ಹೋದರು ಚಿಂತೆಯಿಲ್ಲ. ಮರಿದುಂಬಿಯಾಗಿ ಕೋಗಿಲೆಯಾಗಿ ಹುಟ್ಟಿದರೆ ಜನ್ಮ ಸಾರ್ಥಕವಾಗುತ್ತೆ ಎಂದು ಹೇಳುತ್ತಾರೆ. ಅದರಂತೆ ಸಿದ್ದಯ್ಯ ಪುರಾಣಿಕರು ಕೂಡ ಇಲ್ಲಿನ ಜಲವೆಲ್ಲ ಬರೀ ಜಲವಲ್ಲ ಅದು ಅಮೃತ ಸುಧೆಯು, ವನವೆಲ್ಲ ಬರೀ ವನವಲ್ಲ ಅದು ಮಧುವು ಎಂದು ಅಭಿಮಾನದಿಂದ ಹೇಳುತ್ತಿದ್ದಾರೆ. ಈ ನಾಡಿನ ಶ್ರೇಷ್ಠತೆಗಾಗಿ ಪ್ರತಿಯೊಬ್ಬ ಪ್ರಜೆಯು ನಿಷ್ಠೆಯಿಂದ ದುಡಿಯಬೇಕು ಅಂದಾಗ ಮಾತ್ರ ಇದು ಪಾವನ ತೀರ್ಥವಾಗಿ ಪರಿಣಮಿಸಲು ಸಾಧ್ಯವಾಗುತ್ತದೆ ಎಂದು ಕವಿಗಳು ಹೇಳುತ್ತಾರೆ.

**ಕೋಟಿ ಹೃದಯ ಮೀಟಿ ಬಂತು ಇಂದು ಶುಭ ಶೃತಿ**
**ಪ್ರಜಾರಾಜ್ಯ ಪಟ್ಟವೇರುತಿಹಲು ತಾಯಿ ಭಾರತಿ**

ಸ್ವಾತಂತ್ರ್ಯ ಪೂರ್ವದಲ್ಲಿ ಹರಿದು ಹಂಚಿ ಹೋಗಿದ್ದ ಇಡೀ ದೇಶ ಬ್ರಿಟೀಷರ ಅಧೀನದಲ್ಲಿ ಒಂದಾದಾಗ ನಾವೆಲ್ಲ ಒಂದು ಎಂಬ ಭಾವನೆ ಮೊಳೆತು ರಾಷ್ಟ್ರೀಯ ಪ್ರಜ್ಞೆ ಜಾಗೃತವಾಗಿ ಭಾರತವನ್ನು ಸ್ವಾತಂತ್ರ್ಯಗೊಳಿಸಬೇಕೆಂದು ಪ್ರಯತ್ನಪಟ್ಟರು. ಅದರ ಫಲವಾಗಿ ಪುರಾಣಿಕರು ತಮ್ಮ ಕಾವ್ಯಗಳಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದದ್ದು ಯಾವ ರೂಪದಲ್ಲೇ ಆದರೂ ಅದು ಕವಿಗೆ ಮುಖ್ಯವಾಗುತ್ತದೆ. ಆ ಕಾರಣಕ್ಕಾಗಿ ಸಾವಿರಾರು ಹೃದಯಗಳ ಬಡಿತವನ್ನು ನಿಲ್ಲಿಸಿ ಬಂದಿರುವ ಸ್ವಾತಂತ್ರ್ಯ ಇದು ಇದನ್ನು ತುಂಬಾ ಎಚ್ಚರಿಕೆಯಿಂದ ಕಾಪಿಟ್ಟುಕೊಂಡು ಹೋಗಬೇಕು. ಒಂದೋ ಎರಡೋ ದಿನಕ್ಕೆ ಸಿಕ್ಕಿರುವ ಪ್ರಜಾ ರಾಜ್ಯವಲ್ಲ ಹಲವಾರು ವರ್ಷಗಳ ಹೋರಾಟ, ತ್ಯಾಗ, ಬಲಿದಾನಗಳ ಮೂಲಕ ಬಂದಿರುವಂತಹದ್ದು ಅದಕ್ಕಾಗಿ ತಾಯಿ ಭಾರತಿಯನ್ನು ನಾವು ಮತ್ತೆ ಪರಕೀಯರ ಪಾಲಾಗದಂತೆ ನೋಡಿಕೊಳ್ಳಬೇಕು. ಎಂಬ ಕಿವಿಮಾತನ್ನು ಹೇಳಿದ್ದಾರೆ. ತ್ಯಾಗ, ಬಲಿದಾನಗಳ ಮೂಲಕ ಬಂದಿರುವ ನಾಡು ನುಡಿ ತುಂಬಾ ಸುಂದರವಾಗಿ ಬೆಳೆಯಬೇಕಾಗಿತ್ತು. ಆದರೆ ದುರಾದೃಷ್ಟವಶಾತ್ ಮತ್ತೇ ಬಹುರಾಷ್ಟ್ರೀಯ ಕಂಪನಿಗಳ ಮಾಲಿಕರ ಕೈಯಲ್ಲಿ ನಮ್ಮ ಜುಟ್ಟನ್ನು ಕೊಟ್ಟು ಖಾಲಿ ಕುಳಿತಿದ್ದೇವೆ.

**ಇಂದಿನಿ ದಸರೆಯೊಳ ಪ್ರಥಮ ಪೂಜೆಯು ನಿನಗೆ**
**ರಾಷ್ಟ್ರರಾಜೇಶ್ವರಿಯೆ, ಆತ್ಮ ದೈಸಿರಿಯೆ**
**ಭಗವತಿಯೆ ಭಾರತಿಯ ಭುವನ ವಂದಿತ ಮಾತೆ**
**ಚಾಮುಂಡಿ ಶ್ರೀದೇವಿ ಸಾರಿ ವಾಗೀಶ್ವರಿಯೇ**

ಕನ್ನಡ ನಾಡಿನ ಪವಿತ್ರವಾದ ಹಬ್ಬ ಹರಿದಿನಗಳಲ್ಲಿ ದಸರವು ಒಂದು ಈ ಹಬ್ಬ ಕನ್ನಡನಾಡಿನ ಘನತೆ ಮತ್ತು ಗೌರವದ ಸಂಕೇತವಾಗಿ ಮೈಸೂರಿನ ಚಾಮುಂಡಿ ದೇವಿಯ ಆರಾಧನೆಯೊಂದಿಗೆ ತುಂಬಾ ಸಂಭ್ರಮ ಸಡಗರದಿಂದ ಆಚರಿಸಲಾಗುತ್ತದೆ. ದಸರೆಯಲ್ಲಿ ಪ್ರಥಮ ಪೂಜೆಯೂ ಮಾತೆ ಚಾಮುಂಡಿ ದೇವಿಯ ಪೂಜಾ ಆಗಬೇಕು. ಅದರ ಜೊತೆ ರಾಜ ರಾಜೇಶ್ವರಿ ಕನ್ನಡಿಗರ ಮಾತೆಯ ಪೂಜೆ ನೆರವೇರುತ್ತದೆ. ಅಂದರೆ ಇದು ನಾಡಿನ ಭಾವೈಕ್ಯತೆ ಮತ್ತು ಸಮಗ್ರತೆ ಸಂಕೇತವಾಗಿ ಆಚರಿಸುತ್ತಾರೆ. ಇಂತಹ ಪವಿತ್ರವಾದ ನಾಡಹಬ್ಬವನ್ನು ಕೂಡ ಪುರಾಣಿಕರು ತುಂಬಾ ಅಭಿಮಾನದಿಂದ ಹೇಳುತ್ತಾರೆ.

**ಪರಾಮರ್ಶನ ಗ್ರಂಥಗಳು:**

1. ಗವಿಸಿದ್ದಪ್ಪ ಪಾಟೀಲ, (2003), ಸಾಹಿತ್ಯ ಸಿರಿ, ಕಲಬುರಗಿ: ಅಮರ ಪ್ರಕಾಶನ.
2. ಸಿದ್ದಯ್ಯ ಪುರಾಣೀಕ, (2008), ಸಿದ್ದಯ್ಯ ಪುರಾಣೀಕರ ಸಮಗ್ರ ಕಾವ್ಯ, ಬೆಂಗಳೂರು: ಶ್ರೀಗಿರಿ ಪ್ರಕಾಶನ.
3. ಶೇಷಗಿರಿರಾವ್ ಎಲ್.ಎಸ್., (2017), ಹೊಸಗನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಅಂಕಿತ ಪುಸ್ತಕ.